**ಸಿ.ಸಿ.ನಂ.: 666/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **06-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಶ್ರೀ. ಜಿ.ಆರ್.ಡಿ. ವಕೀಲರಿಂದ</u>**

ಈ ಪ್ರಕರಣದ ವ್ಯವಹಾರ ನಡೆಯುವ ಸಂದರ್ಭದಲ್ಲಿ ನಾನೇ ಶಾಖಾ ವ್ಯವಸ್ಥಾಪಕನಾಗಿರುತ್ತಾನೆ. ನಮ್ಮ ಫಿರ್ಯಾದಿ ಸಂಸ್ಥೆಯು ಸರಕಾರಿ ಕರ್ನಾಟಕ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಈ ಪ್ರಕರಣದ ಸಾಲವನ್ನು ನೀಡವಂತಹ ಸಂದರ್ಭದಲ್ಲಿ ಆರೋಪಿತನಿಂದ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಹಾಗೂ ಫಿರ್ಯಾದಿ ಕುರಿತಾಗಿ ಸಂಪೂರ್ಣ ಮಾಹಿತಿ ಇದೆ. ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಯೊಂದಿಗೆ 10-12 ವರ್ಷಗಳಿಂದ ವ್ಯವಹಾರ ನಡೆಸುತ್ತಿದ್ದಾರೆ. ಈ ಮೊದಲ ಸಾಲಗಳಿಗೆ ಆರೋಪಿತನು ಸರಿಯಾಗಿ ಮರುಪಾವತಿ ಮಾಡುತ್ತಿದ್ದನು.

ನಾವು ರೈತರಿಂದ ಅವರು ಬೆಳದ ಅಡಿಕೆ, ತೆಂಗು ಹಾಗೂ ಕಾಳು ಮೆಣಸುಗಳನ್ನು ನಾವು ಧಲ್ಲಳಿ ರೂಪದಲ್ಲಿ ಪಡೆದುಕೊಳ್ಳುತ್ತೇವೆ. ರೈತರು ನಮ್ಮ ಸಂಘಕ್ಕೆ ತೆಗೆದುಕೊಂಡು ಹಾಕುತ್ತಾರೆ. ನಾವು ಖರೀದಿಸಿದ ಅಡಿಕೆಯ ಹಣವನ್ನು ನಮೂದು ಮಾಡಬೇಕಾಗುತ್ತದೆ. ಆರೋಪಿತನು ನಮ್ಮ ಸಂಸ್ಥೆಯಿಂದ 2023 ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಖರೀದಿ ಮಾಡಿರುತ್ತಾರೆ. ಖರೀದಿದಾರರು ಕೂಡ ಪರವಾನಿಗೆಯನ್ನು ಹೊಂದಿರುತ್ತಾರೆ. ಆರೋಪಿತನ ಪರವಾನಿಗೆ ಪ್ರತಿ ನಮ್ಮ ಹತ್ತಿರ ಇದೆ. ಸದರಿ ಪರವಾನಿಗೆ ಪ್ರತಿಯನ್ನು ನ್ಯಾಯಾಲಯಕ್ಕೆ ಅವಶ್ಯ ವಿದ್ದರೆ ಹಾಜರುಪಡಿಸುತ್ತೇವೆ. ಖರೀದಿದಾರರು ನಮ್ಮ

ಜೊತೆ ಸಹಸದಸ್ಯತ್ವವನ್ನು ಹೊಂದಿರುತ್ತಾರೆ. ಈ ರೀತಿಯಾಗಿ ಸದಸ್ಯತ್ವವನ್ನು ಪಡೆದುಕೊಳ್ಳಲು ಅವರ ಆಧಾರ ಕಾರ್ಡ್ ಮತ್ತು ಭಾವಚಿತ್ರವನ್ನು ಪಡೆದುಕೊಳ್ಳುತ್ತೇವೆ. ಅವರ ಸದಸ್ಯತ್ವಕ್ಕೆ ನಂಬರನ್ನು ನೀಡುತ್ತೇವೆ. ಸದರಿ ದಾಖಲಾತಿಯನ್ನು ಅವಶ್ಯಕತೆ ಇದ್ದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ. ಆರೋಪಿತನ ಸಂಘದ ಸದಸ್ಯತ್ವ ಸಂಖ್ಯೆಯನ್ನು ಫಿರ್ಯಾದಿಯಲ್ಲಿ ನಮೂದಿಸಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ